ಯಾಕ ಹೋಗ್ತೀರಿ ಅಲ್ಲಿಗೆ? ಇಲ್ಲಿ ಸರಕಾರದವರು ಇಷ್ಟೊಳ್ಳೆ ಕಾಲೇಜು ನಿಮ್ಮ ಸಲುವಾಗೇ ಶುರು ಮಾಡ್ಯಾರ'' ಎಂದು ಹೇಳಿದರೆ ಅವು ಸುಮ್ಮನೆ ನಗುತ್ತಿದ್ದವು. ಈ ವಯಸ್ಸಿಗೆ ನಮಗಾಗುವ ತ್ರಾಸು ಅವರಿಗೆ ಆಗುವುದಿಲ್ಲ. ಮೇಲಾಗಿ ಹುಡುಗ ಹುಡುಗಿಯರು ಗುಂಪು ಗುಂಪಾಗಿ ಬಸ್ಸಿನಲ್ಲಿ ಓಲ್ಯಾಡಿ ತೇಲ್ಯಾಡಿ ಹೋಗುವುದರಲ್ಲಿ ಇರುವ ಮಜ ಯೌವನದ ಜೋಕಾಲಿಯಲ್ಲಿ ಜೀಕುತ್ತಿರುವ ಅವರಿಗೆ ಗೊತ್ತಲ್ಲದೇ ನನ್ನಂಥ ಮಧ್ಯ ವಯಸ್ಕಳಿಗೆ ತಿಳಿಯುವುದಿಲ್ಲ. ಹಾಗಾಗಿ ಈ ಕಾರಣಕ್ಕಂತೂ ಪುಷ್ಪಾ ನನ್ನ ಬಳಿ ಬರಲಾರಳು.

ಬೆಲ್ ಆದ ತಕ್ಷಣ ಓಟದ ನಡಿಗೆಯಲ್ಲಿ ಹೋಗಿ ಬಾಗಿಲು ತೆರೆದೆ. ನಿರೀಕ್ಷೆಯಂತೆ ಅವಳು ನಿಂತಿದ್ದಳು. ಇವತ್ತು ಮೇಕಪ್ಪು ಇರಲಿಲ್ಲ. ಮುಖದ ಚರ್ಮವೆಲ್ಲ ಒಣಗಿತ್ತು. ಅಲ್ಲಲ್ಲಿ ಸಣ್ಣಸಣ್ಣ ತೂತುಗಳು. ಬಣ್ಣವನ್ನು ತೊಳೆದುಕೊಂಡು ಬಂದ ಕಲಾವಿದೆಯಂತೆ ಕಾಣುತ್ತಿದ್ದಳು. ಕೂಡುವಂತೆ ಹೇಳಿ ಮುಖ ನೋಡಿದೆ. ಅವಳು ಮಾತನಾಡಲು ಅನುಮಾನಿಸುತ್ತ ಆ ಕಡೆ ಈ ಕಡೆ ನೋಡುತ್ತಿರುವುದನ್ನು ನೋಡಿ, ಸೌಜನ್ಯಕ್ಕಾಗಿ,

''ಚಹಾ ಕುಡಿತೀ?'' ಎಂದು ಕೇಳಿದೆ.

ಅವಳು ''ಹೂಂ'' ಎಂದುಬಿಟ್ಟಳು.

ಆ ಹೊತ್ತಿನಲ್ಲಿ ಚಹಾ ಮಾಡುವ ಮನಸ್ಸಿಲ್ಲದಿದ್ದರೂ ನಾನೇ ಕೇಳಿ ಕಟ್ಟಿಹಾಕಿಸಿಕೊಂಡ ನನ್ನ ಈ

